**( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )**

ಅಸಲು ದಾವೆ ನಂ.**124/2009**

**ದಿನಾಂಕಃ 28-08-2024, ಡಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಎ ಎಸ್ ಎಂ ವಕೀಲರಿಂದಃ

ಈ ದಾವೆಯನ್ನು ಹೂಡಿದ ನಂತರ 1ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿ ದಿಃ21-07-2009 ರಂದು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು ಎಂದರೆ ಸರಿ. ನಂತರ 1ನೇ ಪ್ರತಿವಾದಿ ಪ್ರತಿ ಸುನಾವಣೆ ದಿನಾಂಕದಂದು ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದರು ಎಂದರೆ ಸರಿ. ನನ್ನ ತಾತ 1ನೇ ಪ್ರತಿವಾದಿ ನ್ಯಾಯಾಲಯದಲ್ಲಿ ವಿಚಾರಣೆ ಕೊಡದೇ ಗೈರು ಹಾಜರಾಗಿದ್ದರು ಎಂದರೆ ಸರಿ. 1ನೇ ಪ್ರತಿವಾದಿ ಬದುಕಿರುವವರೆಗೂ ದಾವಾ ಆಸ್ತಿಗಳ ಬಗ್ಗೆ ಮರಣ ಶಾಸನ ಪತ್ರ ಬರೆದ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸಾಕ್ಷಿಯು 1ನೇ ಪ್ರತಿವಾದಿ ಕಾಲು ಏಟು ಮಾಡಿಕೊಂಡಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದು ನುಡಿಯುತ್ತಾರೆ. 2016-17 ರಲ್ಲಿ 1ನೇ ಪ್ರತಿವಾದಿ ಕಾಲಿಗೆ ಏಟು ಮಾಡಿಕೊಂಡಿದ್ದರು. 1ನೇ ಪ್ರತಿವಾದಿ ದಿಃ 20-01-2018 ರಲ್ಲಿ ಮೃತರಾಗಿರುತ್ತಾರೆ.

1ನೇ ಪ್ರತಿವಾದಿ ಕಾಲು ಏಟು ಆದ ನಂತರ ಹೊರಗಡೆ ಯಾರಾದರೂ ಕರೆದುಕೊಂಡು ಬಂದರೆ ಬರುತ್ತಿದ್ದರು ಹಾಗೂ ನ್ಯಾಯಾಲಯಕ್ಕೆ ಬರುತ್ತಿದ್ದರು. ನನಗೆ ಈಗ 41 ವರ್ಷ ವಯಸ್ಸು. ನಾನು ವ್ಯವಸಾಯ ಮತ್ತು ಚಾಲಕ ವೃತ್ತಿಯನ್ನು ಮಾಡುತ್ತೇನೆ. 1ನೇ ಪ್ರತಿವಾದಿಯನ್ನು ನಾನಾಗಲೀ ಅಥವಾ 2ನೇ ಪ್ರತಿವಾದಿ ನನ್ನ ತಾಯಿಯಾಗಲೀ ನ್ಯಾಯಾಲಯಕ್ಕೆ ಕರೆದುಕೊಂಡು ಬರಲು ನನಗೇನೂ ತೊಂದರೆ ಇರಲಿಲ್ಲ.

1ನೇ ಪ್ರತಿವಾದಿಗೆ ಪತ್ರಗಳ ಬಗ್ಗೆ ವ್ಯವಹಾರ ಜ್ಞಾನ ಇತ್ತು. 1ನೇ ಪ್ರತಿವಾದಿಗೆ ವ್ಯವಸಾಯವನ್ನು ಹೊರತುಪಡಿಸಿ ಆದಾಯ ಬರುವ ಬೇರೆ ಯಾವುದೇ ಕೆಲಸ ಇರಲಿಲ್ಲ.

1ನೇ ಪ್ರತಿವಾದಿ ಮರಣ ಶಾಸನ ಪತ್ರ ಮಾಡಿದೆ ಎನ್ನಲಾದ ಬಗ್ಗೆ ದಾವೆಯಲ್ಲಿ ತಿಳಿಸಲು ತೊಂದರೆ ಇರಲಿಲ್ಲ. ನನಗೆ ಮರಣ ಶಾಸನ ಪತ್ರದ ಬಗ್ಗೆ 1ನೇ ಪ್ರತಿವಾದಿ ಮರಣದ ನಂತರ ಗೊತ್ತಾಯಿತು. 1ನೇ ಪ್ರತಿವಾದಿ ಬದುಕಿರುವವರೆಗೂ ದಾವಾ ಆಸ್ತಿಗಳು ವಿಭಾಗ ಆಗಿರಲಿಲ್ಲ ಎಂದರೆ ಸರಿ. ಮರಣ ಶಾಸನ ಪತ್ರ ಮಾಡಿರುವ ವಿಚಾರ ನನಗೆ ತಿಳಿಯುವವರೆಗೂ ದಾವಾ ಆಸ್ತಿಗಳನ್ನು ವಾದಿ, 1 ಮತ್ತು 2ನೇ ಪ್ರತಿವಾದಿಯರು ಅನುಭವಿಸಿಕೊಂಡು ಬರುತ್ತಿದ್ದರು ಎಂದರೆ ಸರಿ.

1ನೇ ಪ್ರತಿವಾದಿ ಕೈ ಸಾಲ ಅಥವಾ ಬ್ಯಾಂಕ್ ನಿಂದ ಸಾಲವನ್ನು ಪಡೆದಿದ್ದಾರೆ ಎನ್ನಲಾದ ವಿಚಾರ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮರಣ ಆದ 2-3 ತಿಂಗಳ ನಂತರ ಮರಣ ಶಾಸನ ಮಾಡಲಾಗಿದೆ ಎನ್ನುವ ವಿಚಾರ ನನಗೆ ಗೊತ್ತಾಯಿತು. 1ನೇ ಪ್ರತಿವಾದಿ ಮರಣ ಶಾಸನ ಪತ್ರ ಮಾಡಿದ್ದಾರೆ ಎಂದು ಮರಣ ಶಾಸನ ಪತ್ರವನ್ನು ಸಬ್ಬತ್ತಿ ಮಂಜೇಗೌಡರು ಮತ್ತು ಕೃಷ್ಣೇಗೌಡರು ನಮ್ಮ ಮನೆಯ ಬಳಿ ಬಂದು 2018 ರಲ್ಲಿ ನನಗೆ ತಂದು ಕೊಟ್ಟಿರುತ್ತಾರೆ.

1ನೇ ಪ್ರತಿವಾದಿ ಒಟ್ಟು ಕುಟುಂಬದ ಪರವಾಗಿ ದಾವಾ ಆಸ್ತಿಗಳನ್ನು ಯಾರಿಂದ ಯಾವಾಗ ಕ್ರಯಕ್ಕೆ ಪಡೆದರು ಎಂಬ ವಿಚಾರವನ್ನು ನನಗೆ ಹೇಳಿದ್ದರಾ ಎಂದರೆ ಸಾಕ್ಷಿಯು ಸ್ವಂತವಾದ ಕ್ರಯಕ್ಕೆ ಪಡೆದಿರುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದು 1ನೇ ಪ್ರತಿವಾದಿ ಹೇಳುತ್ತಿದ್ದರು . 1ನೇ ಪ್ರತಿವಾದಿ ಮೂಲತಃ ವಿಜಿ ಕೊಪ್ಪಲಿನವರು, ಅವರ ತಂದೆಯ ಹೆಸರು ಮರೀಗೌಡ. 1ನೇ ಪ್ರತಿವಾದಿಗೆ ವಿ ಜಿ ಕೊಪ್ಪಲಿನಲ್ಲಿ ಪಿತ್ರಾರ್ಜಿತ ಆಸ್ತಿಗಳು ಇದ್ದವಾ ಎಂದು ನಾನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇಲ್ಲ ಎಂದು ನುಡಿಯುತ್ತಾರೆ.

ನಾನು ಹಾಜರುಪಡಿಸಿರುವ ಕ್ರಯ ಪತ್ರಗಳ ಮೂಲ ಪ್ರತಿಗಳು 1ನೇ ಪ್ರತಿವಾದಿಯ ಬಳಿ ಇರಬಹುದು. ದಾವಾ ಆಸ್ತಿಗಳನ್ನು 1ನೇ ಪ್ರತಿವಾದಿ ವಾದಿ ಮತ್ತು 2ನೇ ಪ್ರತಿವಾದಿ ಹುಟ್ಟುವ ಮುಂಚೆ ಕ್ರಯಕ್ಕೆ ಪಡೆದಿರುತ್ತಾರೆ. ಯಾವ ವರ್ಷದಲ್ಲಿ ಕ್ರಯಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಲಿಖಿತ ಹೇಳಿಕೆಯನ್ನು ಅವರ ವಕೀಲರ ಮುಖಾಂತರ ಅವರೇ

ಸಲ್ಲಿಸಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ಇರುವ ಸಹಿ 1ನೇ ಪ್ರತಿವಾದಿಯ ಸಹಿ ಎಂದರೆ ಸರಿ.

ಮರಣ ಶಾಸನ ಪತ್ರದಲ್ಲಿರುವ ಒಕ್ಕಣೆಗಳನ್ನು ಯಾರು, ಎಲ್ಲಿ ಹೇಳಿ ಬರೆಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಮರಣ ಶಾಸನ ಪತ್ರ ಮಾಡಲಾಗಿದೆ ಎನ್ನಲಾದ ನಂತರದ ದಿನಾಂಕದಲ್ಲಿ ಪ್ರತಿವಾದ ಪತ್ರವನ್ನು 1ನೇ ಪ್ರತಿವಾದಿ ಸಲ್ಲಿಸಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಯು ಅವರ ವಾರಸುದಾರರನ್ನು ಅವರ ಒಟ್ಟು ಕುಟುಂಬದಿಂದ ಹೊರದೂಡಿರಲಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು ಎಂದು 1ನೇ ಪ್ರತಿವಾದಿ ವಾದಿಯ ವಿರುದ್ಧ ದಾವೆ ಹೂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**